ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ವಂದನೀಯ ಫಾದರ್ ಪೌಲ್ ಪಿಂಟೋರವರೇ, ಗೌರವಾನ್ವಿತ ಮುಖ್ಯ ಅತಿಥಿಗಳಾದ ಶ್ರೀ ಫೆಲಿಕ್ಸ್ ಲೋಬೊ ರವರೇ, ವೇದಿಕೆಯಲ್ಲಿರುವ ಅತಿಥಿಗಳೇ, ಗಣ್ಯರೇ, ಆತ್ಮೀಯ ಹೆತ್ತವರೇ – ಪೋಷಕರೇ, ಹಿರಿಯ ವಿದ್ಯಾರ್ಥಿಗಳೇ ಮತ್ತು ಪ್ರೀತಿಯ ವಿದ್ಯಾರ್ಥಿ ಮಿತ್ರರೇ,

ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನದಂತೆ ಯೋಗ್ಯ ರೀತಿಯಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ಸುಸಂಸ್ಕೃತ ಸಂಪನ್ನರಾಗಿಸುತ್ತಿರುವ ವಿದ್ಯಾ ಸಂಸ್ಥೆ ನಮ್ಮದು. ನಮ್ಮ ಈ ಶಿಕ್ಷಣ ಸಂಸ್ಥೆಯ 2008–09 ನೇ ಶೈಕ್ಷಣಿಕ ವರ್ಷದ ಚಟುವಟಿಕೆಗಳು ಮತ್ತು ಸಾಧನೆಗಳನ್ನೊಳಗೊಂಡ ವರದಿ ಈಗ ನಿಮ್ಮ ಮುಂದಿದೆ. ನಾನು ಪ್ರಾಂಶುಪಾಲನಾಗಿ ಜವಾಬ್ದಾರಿ ವಹಿಸಿಕೊಂಡ ಬಳಿಕದ ನನ್ನ ಸೇವಾವಧಿಯ ಪ್ರಥಮ ವಾರ್ಷಿಕ ವರದಿಯೂ ಇದಾಗಿದ್ದು, ಇದನ್ನು ಸಜ್ಜನ ಬಂಧುಗಳಾದ ತಮ್ಮೆದುರು ಸಂತೋಷದಿಂದ ಪ್ರಸ್ತುತ ಪಡಿಸುತ್ತಿದ್ದೇನೆ.

<u>ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು :</u>

ಬಿ.ಎ ಮತ್ತು ಬಿ.ಕಾಂ. ಪದವಿ ತರಗತಿಗಳಲ್ಲದೇ ಇದೀಗ ನಮ್ಮಲ್ಲಿ ಬಿ.ಬಿ.ಎಂ. ಪದವಿಯೂ ಇದ್ದು ಮೊದಲ ಬಾರಿಗೆ ಎರಡನೆ ವರ್ಷಕ್ಕೆ ಕಾಲಿರಿಸಿದೆ. ಇದರೊಂದಿಗೆ ಮೊದಲಬಾರಿಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 500 ಗಡಿಯನ್ನು ದಾಟಿದೆ. ಅಧ್ಯಾಪಕರ ಹಾಗೂ ಬೋಧಕೇತರ ಸಿಬ್ಬಂದಿಗಳನ್ನೊಳಗೊಂಡ 38 ಮಂದಿಯ ಉತ್ಸಾಹಿ ಕಾರ್ಯಕರ್ತರ ತಂಡವಿದೆ 21 ಪೂರ್ಣಕಾಲಿಕ ಉಪನ್ಯಾಸಕರು, 5 ಅರೆಕಾಲಿಕ ಉಪನ್ಯಾಸಕರು. 12 ಶಿಕ್ಷಕೇತರರು ಕಛೇರಿ ಮತ್ತು ಗ್ರಂಥಾಲಯಗಳಲ್ಲಿ ಸಂಸ್ಥೆಯ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ರೆ.ಫಾ. ಎಲಿಯಾಸ್ ಡಿಸೋಜಾ , ಶ್ರೀ ಸಂದೇಶ್ ಶೆಟ್ಟಿ, ಕು. ಪುಷ್ಪಾಲತಾ, ಕು. ರೇಖಾ, ಶ್ರೀಮತಿ ಶಾಲಿನಿ ಮೆಹಂದಳೆ ಇವರು ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ವಿಭಾಗ, ಶ್ರೀ ಅಶೋಕ್ ರಾಕೇಶ್ ಡಿಸೋಜಾ, ಇತಿಹಾಸ ವಿಭಾಗ, ರೋಶನ್ ಮನೋಜ್ ಡಿಸೋಜಾ, ಕಂಪ್ಯೂಟರ್ ವಿಭಾಗ, ಶ್ರೀ ರಾಮ್ ಪ್ರಸಾದ್ ನಾಯಕ್, ಹಿಂದಿ ವಿಭಾಗ ಮತ್ತು ಶ್ರೀಮತಿ ಚಂದ್ರಕಲಾ ರಾಜ್ಯ ಶಾಸ್ತ್ರ ವಿಭಾಗ ಇವರೆಲ್ಲರೂ ಈ ವರ್ಷ ನಮ್ಮ ವಿದ್ಯಾರ್ಥಿಗಳ ಮಾರ್ಗದರ್ಶನಕ್ಕಾಗಿ ನಮ್ಮ ಜೊತೆ ಸೇರಿದ್ದಾರೆ. ಇವರೆಲ್ಲರನ್ನೂ ಪರಿಚಯಿಸಿ ಸ್ವಾಗತಿಸಲು ನಾನು ಸಂತೋಷಪಡುತ್ತೇನೆ. ಈ ಸಂಸ್ಥೆಯ ಏಳಿಗೆಗಾಗಿ ದುಡಿದು ಸಂಸ್ಥೆಯನ್ನು ಬಿಟ್ಟು ಹೋದವರನ್ನು ಕೃತಜ್ಞತೆಯಿಂದ ಸ್ಮರಿಸುವುದೂ ನನ್ನ ಕರ್ತವ್ಯವಾಗಿದೆ. ರೆ.ಫಾ ವಲೇರಿಯನ್ ಮಂಡೋನ್ಸಾರವರು 31.12.2008 ರಂದು ಈ ಸಂಸ್ಥೆಯಿಂದ ನಿವೃತ್ತರಾಗಿದ್ದಾರೆ. ಈ ಸಂಸ್ಥೆಗೊಂದು ಹೊಸ ಆಯಾಮ, ರೂಪುರೇಷೆಯನ್ನು ತಂದು ಕೊಟ್ಟ ಮಹಾನುಭಾವರವರು. ಅವರಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು. ಹಾಗೆಯೇ ಪ್ರೊ. ಜೋಸೆಫ್ ಎಂ. ಚುರೆಕ್ಕನ್ ನಿವೃತ್ತಿಯ ಬಳಿಕವೂ ಅನೇಕ ವರ್ಷಗಳ ಕಾಲ ಇಂಗ್ಲೀಷ್ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿ ಜ್ಯೋತಿ ಬೆನಿಟಾ ರೊಸಾರಿಯೋ ಕಾಮತ್, ಕು. ಪದ್ಮಾವತಿ, ಶ್ರೀಮತಿ ಗೀತಾ ಕಾರಂತ್ , ಶ್ರೀಮತಿ ಶಿಲ್ಪಾ ನ್ಯಾಕ್ , ಶ್ರೀಮತಿ ವಿವಿಲಿಯಾ ಕ್ವಾಡ್ರಾಸ್ ಇವರೆಲ್ಲರೂ ನಮ್ಮ ಕಾಲೇಜಿನ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿರುವರು.ಇವರ ಸೇವೆಯನ್ನು ಕೃತಜ್ಞಪೂರ್ವಕವಾಗಿ ಸ್ಮರಿಸುತ್ತೇವೆ. ವಾಣಿಜ್ಯ ವಿಭಾಗದ ಪ್ರೋಫೇಸರ್ ಗುಣಕರ್ ಎಸ್., ಇವರು ತಮ್ಮ ಪಿ.ಎಚ್.ಡಿ., ಅಧ್ಯಯನಕ್ಕೆ ತೆರಳಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳು ಹಾಗೂ ಯಶಸ್ವಿಗಾಗಿ ಶುಭ ಹಾರೈಕೆಗಳು. ಜೊತೆಗೆ ಸ್ಟಾಫ್ ಸೆಕ್ರೆಟರಿಯಾಗಿ, ಎನ್.ಎಸ್.ಎಸ್., ಸಹಾಯಕ ಅಧಿಕಾರಿಯಾಗಿ ಅವರು ನೀಡಿದ ಸಹಕಾರಕ್ಕೆ ವಂದನೆಗಳು.

ಇತಿಹಾಸ ವಿಭಾಗದ ಉಪನ್ಯಾಸಕರಾದ ಶ್ರೀ ಅಶೋಕ್ ರಾಕೇಶ್ ಡಿಸೋಜಾ ರವರು 'ಮ್ಯಾಂಗಲೋರ್ ಮ್ಯಾಗಜೀನ್‌ನಲ್ಲಿ ಬಿಂಬಿತ ದಕ್ಷಿಣ ಕನ್ನಡ' ಎಂಬ ಮಹಾಪ್ರಬಂಧವನ್ನು ಎಂ.ಫಿಲ್., ಪದವಿಗಾಗಿ ಹಂಪಿ ವಿಶ್ವ ವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಇದೇ ಬರುವ ದಿನಾಂಕ 29.12.2008 ರಂದು ನಡೆಯಲಿರುವ ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸಲಿದ್ದಾರೆ. ಅವರಿಗೆ ಅಭಿನಂದನೆಗಳು ಹಾಗೂ ಶುಭ ಹಾರೈಕೆಗಳು. ಅರ್ಥಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ. ರಾಧಾಕೃಷ್ಣ ಭಟ್ ಎಂ., ರವರು ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ ಮತ್ತು ಬ್ರಹ್ಮಾವರ ಎಸ್.ಎಂ.ಎಸ್ ಕಾಲೇಜಿನಲ್ಲಿ ನಡೆದ 2 ದಿನಗಳ ಎನ್‌ಎಎಸಿ ಎಕ್ರೆಡಿಟೇಶನ್ ಕಾರ್ಯಾಗಾರದಲ್ಲಿ, ಸೈಂಟ್ ಮೇರಿಸ್ ಕಾಲೇಜು, ಶಿರ್ವ ಇಲ್ಲಿ ಸೆಮಿನಾರ್‌ನಲ್ಲಿ , ಮಂಗಳೂರು ವಿ.ವಿ ಅರ್ಥಶಾಸ್ತ್ರ ಒಕ್ಕೂಟ ಮತ್ತು ಧವಳಾ ಕಾಲೇಜು ಮೂಡಬಿದ್ರೆಯವರು ಸಂಯುಕ್ತವಾಗಿ ಆಯೋಜಿಸಿದ್ದ ಪರಿಸರ ಅರ್ಥಶಾಸ್ತ್ರ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. ಜುಲೈ 30 ರಂದು ಕಟೀಲಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಆಯೋಜಿಸಿದ 224 ನೆಯ ಮಧ್ಯವರ್ಜನಾ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. 19.12.2008 ರಂದು ನಮ್ಮ ಕಾಲೇಜಿನಲ್ಲಿ ಏಕದಿನದ ಅರ್ಥಶಾಸ್ತ್ರದ ರಾಜ್ಯಮಟ್ಟದ ಸಮ್ಮೇಳನವನ್ನು ಬಹಳ ಯಶಸ್ವಿಯಾಗಿ ಆಯೋಜಿಸಿದ್ದಾರೆ ಅದಕ್ಕಾಗಿ ಇವರನ್ನು ವಿಶೇಷವಾಗಿ ಅಭಿನಂದಿಸುವುದಲ್ಲದೇ ಸಹಕರಿಸಿದ ಎಲ್ಲಾ ಸಿಬ್ಬಂಧಿ ವರ್ಗದವರಿಗೆ ಹಾಗೂ ವಿದ್ಯಾರ್ಥಿಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಮಂಗಳೂರು ವಿ.ವಿ ಅರ್ಥಶಾಸ್ತ್ರ ಒಕ್ಕೂಟದ ಜೊತೆ ಕಾರ್ಯದರ್ಶಿ ಮತ್ತು ಮಂಗಳೂರು ವಿ.ವಿ ಕಾಲೇಜು ಶಿಕ್ಷಕರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಆಗಿರುವ ಅರ್ಥಶಾಸ್ತ್ರ ವಿಭಾಗದ ಪ್ರೋಫೆಸರ್ ಪುರುಷೋತ್ತಮ ಕೆ.ವಿ., ಯವರು ಧವಳಾ ಕಾಲೇಜು ಮೂಡಬಿದ್ರೆಯಲ್ಲಿ ನಡೆದ ಅರ್ಥಶಾಸ್ತ್ರ ಒಕ್ಕೂಟದ ಪ್ರಶ್ನಾಕೋಶಿ ಕಾರ್ಯಾಗಾರದಲ್ಲಿ , ಧವಳಾಕಾಲೇಜು ಮೂಡಬಿದ್ರೆಯಲ್ಲಿ ನಡೆದ ಅರ್ಥಶಾಸ್ತ್ರ ಒಕ್ಕೂಟದ ಪರಿಸರ ಅರ್ಥಶಾಸ್ತ್ರ ಕಾರ್ಯಾಗಾರದಲ್ಲಿ , ಬೆಂಗಳೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಶಿಕ್ಷಕರ ಸಮ್ಮೇಳನದಲ್ಲಿ, ಪಿಲಿಕುಳ ಮಂಗಳೂರು ಇಲ್ಲಿ ನಡೆದ ರಾಷ್ಟ್ರಮಟ್ಟದ ಪರಿಸರ ಸಂರಕ್ಷಣೆ ಕುರಿತ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತಾರೆ.

ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ. ಕೆ. ಗೋವಿಂದ ಭಟ್‌ರವರು ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರದಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಲ್ಲದೆ, ನಮ್ಮ ಕಾಲೇಜಿನಲ್ಲಿ ಧೃತಿ ಫೌಂಡೇಶನ್‌ನ ಸಹಯೋಗದಲ್ಲಿ 'ಪರಿಣಾಮಕಾರಿ ಅಧ್ಯಾಪನ' ಎಂಬ ಒಂದು ದಿನದ ಕಾರ್ಯಾಗಾರವನ್ನು ಬಹಳ ಯಶಸ್ವಿಯಾಗಿ ಆಯೋಜಿಸಿದ್ದಾರೆ . ಉತ್ತಮ ಸಂಘಟನೆಗಾಗಿ ಅವರಿಗೆ ಕೃತಜ್ಞತೆಗಳು. ನಮ್ಮ ಕಾಲೇಜಿನ ಮತ್ತು ಪರಿಸರದ ಅನೇಕ ಶಿಕ್ಷಣ ಸಂಸ್ಥೆಗಳ ಅಧ್ಯಾಪಕ ಶಿಕ್ಷಕರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗಳನ್ನು ಹೊರತರುವುದಕ್ಕಾಗಿ ಕವನ ರಚನಾ ಕಮ್ಮಟವನ್ನು ನಡೆಸಿ ಉತ್ತಮ ಕವಿಗಳನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಟಾಫ್ ಸೆಕ್ರೇಟರಿಯಾಗಿ ಸೇವೆ ಸಲ್ಲಿಸುತ್ತಿರುವ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ನೇಮಿಚಂದ್ರ ಗೌಡ ಇವರು ಮಂಗಳೂರು ವಿ.ವಿ.ಯ ಸಹಯೋಗದೊಂದಿಗೆ ಕೆನರಾ ಕಾಲೇಜಿನಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ, ಮಂಗಳೂರು ಕನ್ನಡ ಅಧ್ಯಾಪಕರ ಸಂಘ – ವಿಕಾಸ ಇದರ ಸಹಯೋಗದೊಂದಿಗೆ ಕಟೀಲು ಕಾಲೇಜಿನಲ್ಲಿ ನಡೆದ ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು – ಸವಾಲುಗಳು ವಿಷಯದ ರಾಜ್ಯಮಟ್ಟದ ಕಾರ್ಯಾಗಾರಗಳಲ್ಲಿ ಭಾಗವಹಿಸಿರುತ್ತಾರೆ.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಜನಾರ್ಧನನ್ ಪಿ., ಇವರು ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರದಲ್ಲಿ ನಡೆದ **NAAC Re accredition, 2** ದಿನಗಳ ಕಾರ್ಯಾಗಾರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾರ್ಕೂರಿನಲ್ಲಿ ನಡೆದ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತಾರೆ.

ಇಂಗ್ಲೀಷ್ ವಿಭಾಗದ ಮುಖ್ಯಸ್ಥರಾದ ರೆ.ಫಾ. ಎಲಿಯಾಸ್ ಡಿ'ಸೋಜರವರು ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರದಲ್ಲಿ ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತಾರೆ.

ಎಲ್ಲಾ ವಿಭಾಗದ ಅಧ್ಯಾಪಕರು ಹಲವಾರು ಕಾರ್ಯಾಗಾರಗಳಲ್ಲಿ ಭಾಗವಹಿಸಿರುವುದಲ್ಲದೇ ತಮ್ಮ ತಮ್ಮ ವಿಭಾಗಗಳ ವತಿಯಿಂದ ನಡೆಯುವ ವಿವಿಧ ಸಂಘ ಸಂಸ್ಥೆಗಳ ಮೂಲಕ ವಿದ್ಯಾರ್ಥಿಗಳಿಗೆ ರಚನಾತ್ಮಕ ತರಬೇತಿ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

<u>ಫಲಿತಾಂಶ :</u> **2008** ನೇ ಎಪ್ರಿಲ್‌ನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ನಮ್ಮ ವಿದ್ಯಾರ್ಥಿಗಳ ಸಾಧನೆ ಈ ರೀತಿ ಇದೆ.

| | |
|---|---|
| ಪ್ರಥಮ ವರ್ಷ ಬಿ.ಬಿ.ಎಂ ಪದವಿ | : **71.88** % |
| ಪ್ರಥಮ ಬಿಕಾಂ ಪದವಿ | : **66.15** % |
| ಪ್ರಥಮ ವರ್ಷ ಬಿ.ಎ ಪದವಿ | : **70.42** % |
| ದ್ವಿತೀಯ ವರ್ಷ ಬಿ.ಕಾಂ ಪದವಿ | : **90.14** % |
| ದ್ವಿತೀಯ ವರ್ಷ ಬಿ.ಎ ಪದವಿ | : **98.03** % |
| ಅಂತಿಮ ವರ್ಷ ಬಿ.ಕಾಂ ಪದವಿ | : **77.63** % |
| ಅಂತಿಮ ವರ್ಷ ಬಿ.ಎ ಪದವಿ | : **92.40** % |

ಫಲಿತಾಂಶದಲ್ಲಿ ಗಣನೀಯ ಸುಧಾರಣೆಯಾಗಿರುವುದು ಸಂತಸದ ವಿಷಯ. ದ್ವಿತೀಯ ಬಿ.ಕಾಂ. ನ ಸುಶ್ಮಿತಾ ಇವರು ಕನ್ನಡ ಭಾಷಾ ವಿಷಯ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿಯೇ ಅತ್ಯಧಿಕ ಗಳಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ವಿಶ್ವವಿದ್ಯಾನಿಲಯ ಕನ್ನಡ ಅಧ್ಯಾಪಕರ ಸಂಘ "ವಿಕಾಸ" ಅವರನ್ನು ಗುರುತಿಸಿ ಕಟೀಲು ಕಾಲೇಜಿನಲ್ಲಿ ನಡೆದ ಕಾರ್ಯಾಗಾರದಲ್ಲಿ ಸ್ಮರಣಿಕೆ, ಪ್ರಮಾಣಪತ್ರಗಳನ್ನು ನೀಡಿ ಗೌರವಿಸಲಾಗಿದೆ. ಕು. ಜ್ಯೋತಿ ಶೈಲ ಆರಾನ್ನಾ, ಬಿ.ಎ., ವಿದ್ಯಾರ್ಥಿನಿ ವಿಶ್ವವಿದ್ಯಾನಿಲಯ ಮಟ್ಟದ ಬಿ.ಎ./ಬಿ.ಕಾಂ./ಬಿ.ಎಸ್ಸಿ., ಪರೀಕ್ಷೆಯಲ್ಲಿ ಹಿಂದಿ ಭಾಷಾ ವಿಷಯದಲಿ ಅತ್ಯಧಿಕ ಅಂಕ ಗಳಿಸಿ ವಿಶ್ವವಿದ್ಯಾನಿಲಯದಿಂದ ಚಿನ್ನದ ಪದಕ ಗಳಿಸಿದ್ದಾರೆ, ಕಾಲೇಜಿಗೆ ಈ ಮೂಲಕ ಕೀರ್ತಿ ತಂದ ಅವರನ್ನು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಕ್ಯಾಂಪಸ್ ಸೆಲೆಕ್ಷನ್ :

ಆನೇಕ ಬಹುರಾಷ್ಟ್ರೀಯ ಮತ್ತು ಇನ್ನಿತರ ಕಂಪೆನಿಗಳು ನಮ್ಮ ಕಾಲೇಜಿನಲ್ಲಿ ಬಂದು ಉದ್ಯೋಗಕ್ಕೆ ಅವಕಾಶ ಕಲ್ಪಿಸಿಕೊಡುತ್ತಿದ್ದಾರೆ. ಗ್ರಾಮಾಂತರ ವಿದ್ಯಾರ್ಥಿಗಳಿಗೆ ಇಂತಹ ಅವಕಾಶ ಸಿಗುತ್ತಿರುವುದು ನಮಗೆ ತುಂಬಾ ಹರ್ಷ ತಂದಿದೆ.

ಅನೇಕ ವಿದ್ಯಾರ್ಥಿಗಳು ಪರೀಕ್ಷಾ ತಯಾರಿ ನಡೆಸುವುದು, ಸಂದರ್ಶನಕ್ಕೆ ಸಿದ್ದತೆ ಮಾಡುವ ಬಗ್ಗೆ ಅನುಭವ ಪಡೆದುಕೊಂಡಿದ್ದಾರೆ. ಕಳೆದ ಸಾಲಿನ ಅಂತಿಮ ವಾಣಿಜ್ಯ ಪದವಿಯ ಪ್ರಮೋದ್ ಮತ್ತು ವಿದ್ಯಾ ಈ ಸಂಸ್ಥೆಯಿಂದ ಆಯ್ಕೆಗೊಂಡು ಬೆಂಗಳೂರಿನಲ್ಲಿ ಉತ್ತಮ ಉದ್ಯೋಗದಲ್ಲಿದ್ದಾರೆ.

<u>ನಾಗರಿಕ ಪರೀಕ್ಷೆಗಳ ತರಬೇತಿ</u> :

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನಾಗರಿಕ ಸೇವೆಗಳ ಪ್ರವೇಶಕ್ಕಾಗಿ ತರಬೇತಿ ತರಗತಿಗಳು, ಈ ಯೋಜನೆಯನ್ನು ಯು.ಜಿ.ಸಿ ಯ 11 ನೇ ಯೋಜನೆಯ ಮಾರ್ಗದರ್ಶನ ಮತ್ತು ಆರ್ಥಿಕ ಸಹಯೋಗದೊಂದಿಗೆ ಕಾಲೇಜಿನಲ್ಲಿ ಪ್ರಾರಂಭಿಸಲಾಗಿದೆ.
ಈ ಯೋಜನೆಯ ಮೂಲ ಉದ್ದೇಶ ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಗೂ ವಿದ್ಯಾಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತಯಾರಿಸಿಕೊಳ್ಳುವುದು.
ದಿನಾಂಕ ಅಗಸ್ಟ್ 4 ರ ಸೋಮವಾರದಂದು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಾಗಿ ಪುನಶ್ಚೇತನ ಶಿಬಿರವನ್ನು ಆಯೋಜಿಸಲಾಗಿತ್ತು. ಸುಮಾರು 207 ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ನಮ್ಮ ಕಾಲೇಜಿನ ವಾಣಿಜ್ಯ ವಿಭಾಗದ ಪ್ರೊ. ಗುಣಕರ್ ಎಸ್., ಇವರು ಆಸಕ್ತ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ಒದಗಿಸಿದರು.

ಯು.ಜಿ.ಸಿ ಯ ಆರ್ಥಿಕ ನೆರವಿನಿಂದ ವಿದ್ಯಾರ್ಥಿಗಳ ತರಬೇತಿಗಾಗಿ ಸುಮಾರು 41000 ರೂಪಾಯಿ ಮೌಲ್ಯದ ಪುಸ್ತಕಗಳನ್ನು ಖರೀದಿಸಲಾಗಿದೆ. ನಾಗರಿಕ ಸೇವಾ ಪರೀಕ್ಷೆಗಳನ್ನು ಎದುರಿಸುವುದಕ್ಕಾಗಿ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಪ್ರಾರಂಭಿಸಲು ಹೊಸ ಯೋಜನೆಗಳನ್ನು ರೂಪಿಸಲಾಗಿದೆ. ಈ ಎಲ್ಲಾ ಕಾರ್ಯಗಳನ್ನು ಪ್ರೊ. ಬಿ. ಹೆರಾಲ್ಡ್ ಡಿ'ಸೋಜಾ ರವರು ವಿಭಾಗದ ಎಲ್ಲಾ ಉಪನ್ಯಾಸಕರ ಮಿತ್ರರ ಸಹಕಾರದೊಂದಿಗೆ ಯಶಸ್ವಿಗೊಳಿಸುತ್ತಿದ್ದಾರೆ. ಅವರೆಲ್ಲರೂ ಅಭಿನಂದನಾರ್ಹರು.

<u>ವಿದ್ಯಾರ್ಥಿ ಮತ್ತು ಕ್ಷೇಮ ಪಾಲನಾ ಮಂಡಳಿ</u> :

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 508. ಇದರಲ್ಲಿ 181 ಹುಡುಗರು ಹಾಗೂ 327 ಹುಡುಗಿಯರು. ವಿದ್ಯಾರ್ಥಿಗಳ ಬೇರೆ ಬೇರೆ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ತರಗತಿಗಳಿಂದ ತಲಾ ಇಬ್ಬರು ಸದಸ್ಯರಂತೆ ಎಲ್ಲಾ 8 ತರಗತಿಗಳಿಂದ ಒಟ್ಟು 16 ಪ್ರತಿನಿಧಿಗಳನ್ನು ಒಳಗೊಂಡಿರುವ ಮಂಡಳಿಗೆ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಯಾಗಿ ಪುರುಷೋತ್ತಮ ಕೆ.ವಿ., ಇವರು ಕಾರ್ಯನಿರ್ವಹಿಸುತ್ತಿದ್ದಾರೆ. ತರಗತಿ ಪ್ರತಿನಿಧಿಗಳ ವಿವರ ಈ ಕೆಳಗಿನಂತಿದೆ.

| | | | |
|---|---|---|---|
| 1. | ತೃತೀಯ ಬಿ.ಎ. | : | ಸ್ಟೀವನ್ ಮತ್ತು ರೋಹಿಣಿ |
| 2 | ತೃತೀಯ ಬಿ.ಕಾಂ | : | ರೋಶನ್ ಮತ್ತು ಟೀನಾ |
| 3 | ದ್ವಿತೀಯ ಬಿ.ಎ. | : | ಹೇಮಂತ್ ಮತ್ತು ಸುರೇಖಾ |
| 4. | ದ್ವಿತೀಯ ಬಿ.ಕಾಂ. | : | ಕೇವಿನ್ ಮತ್ತು ಸಾರಿಕಾ |
| 5. | ದ್ವಿತೀಯ ಬಿ.ಬಿ.ಎಂ | : | ನೀಲೇಶ್ ಮತ್ತು ನಿಹಾದ್ ಬೇಗಂ |
| 6. | ಪ್ರಥಮ ಬಿ.ಎ. | : | ಸ್ಪೈಕರ್ ಎಕ್ಕ ಮತ್ತು ಸುಷ್ಮಾ |
| 7. | ಪ್ರಥಮ ಬಿ.ಕಾಂ. | : | ದಿಲೀಪ್ ಮತ್ತು ಶರಧಿ |
| 8. | ಪ್ರಥಮ ಬಿ.ಬಿ.ಎಂ. | : | ಶೇಕ್ ಜುನೈದ್ ಮತ್ತು ಸೆಪ್ನಾ |

ನಮ್ಮ ಕಾಲೇಜಿನ ತೃತೀಯ ಬಿ.ಎ. ತರಗತಿಯ ವಿದ್ಯಾರ್ಥಿನಿ ಕು. ಜಯಲಕ್ಷ್ಮಿ ಇವರಿಗೆ ವೈದ್ಯಕೀಯ ವೆಚ್ಚ ಭರಿಸಲು ರೂ. 12000.00 ( ಹನ್ನೆರಡು ಸಾವಿರ ರೂಪಾಯಿ)ಗಳನ್ನು ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕ – ಶಿಕ್ಷಕೇತರರಿಂದ ಸಂಗ್ರಹಿಸಿ ನೀಡಲಾಗಿದೆ. ಕೆಲವು ತುರ್ತು ಸಂಧರ್ಭಗಳಲ್ಲಿ ನಮ್ಮ ಅನೇಕ ವಿದ್ಯಾರ್ಥಿಗಳು ರಕ್ತದಾನ ಮಾಡಿ ಮಾನವೀಯತೆಯನ್ನು ಮೆರೆದಿದ್ದಾರೆ. ಅಂತಹ ಎಲ್ಲಾ ವಿದ್ಯಾರ್ಥಿಗಳನ್ನು ನಿಮ್ಮೆಲ್ಲರ ಪರವಾಗಿ ಅಭಿನಂದಿಸುತ್ತಿದ್ದೇನೆ.

ಸಂಸ್ಥಾಪಕರ ದಿನಾಚರಣೆ, ಪೊಂಪೈ ದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆಯನ್ನು ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಅತ್ಯಂತ ಶಿಸ್ತಿನಿಂದ ಹಾಗೂ ಉತ್ಸಾಹದಿಂದ ನಡೆಸಿಕೊಟ್ಟಿದ್ದಾರೆ. ನಮ್ಮ ಕಾಲೇಜಿನಲ್ಲಿ ವಿವಿ ಮಟ್ಟದ ಟೇಬಲ್ ಟೆನಿಸ್ ಸ್ಪರ್ಧೆಯ ಪ್ರಯುಕ್ತ ನಡೆಸಿದ ಲಕ್ಕಿಡಿಪ್ ಟಿಕೇಟ್‌ಗಳನ್ನು ಮಾರಿ ಧನ ಸಂಗ್ರಹಿಸುವುದರ ಮೂಲಕ ಕಾಲೇಜಿನ ಸರ್ವತೋಮುಖ ಅಭಿವೃದ್ದಿಗೆ ತಮ್ಮ ಪ್ರಾಮಾಣಿಕ ಸೇವೆಯನ್ನು ಎಲ್ಲಾ ವಿದ್ಯಾರ್ಥಿಗಳು ಸಲ್ಲಿಸಿರುತ್ತಾರೆ.

ಕಾಲೇಜಿನ ಪ್ರತಿಯೊಂದು ಚಟುವಟಿಕೆಯಲ್ಲಿಯೂ ವಿದ್ಯಾರ್ಥಿಗಳು ಎಲ್ಲಾ ರೀತಿಯ ಸಹಕಾರವನ್ನು ನೀಡುವುದರೊಂದಿಗೆ ಎಲ್ಲಾ ಶಿಕ್ಷಕ ಶಿಕ್ಷಕೇತರರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರನ್ನು ಇವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಪ್ರೊ. ಪುರುಷೋತ್ತಮ ಕೆ.ವಿ., ಯವರನ್ನು ಅಭಿನಂದಿಸುತ್ತೇನೆ.

ನಮ್ಮ ಕಾಲೇಜಿನಲ್ಲಿ ಓದುತ್ತಿದ್ದ ಪ್ರಥಮ ಬಿ.ಕಾಂ ನ ವಿದ್ಯಾರ್ಥಿನಿ ಪ್ರಸನ್ನ ಕುಮಾರಿಯವರ ಅಕಾಲಿಕ ಮರಣಕ್ಕೆ ಕಾಲೇಜು ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

ಗ್ರಂಥಾಲಯ:

ವಿದ್ಯಾರ್ಥಿಗಳ ಜ್ಞಾನಾಭಿವೃದ್ದಿಗೆ ಸರ್ವ ರೀತಿಯಲ್ಲಿ ಪೂರಕವಾಗುವಂತಹ ಅತ್ಯುತ್ತಮ ಗ್ರಂಥಾಲಯ ನಮ್ಮಲ್ಲಿರುವುದು ಹೆಮ್ಮೆಯ ವಿಷಯ. ಪ್ರಸ್ತುತ 2008–09 ರಲ್ಲಿ ನಮ್ಮ ಗ್ರಂಥಾಲಯವು ರೂ. 10,33,348.00 ಮೌಲ್ಯದ ಒಟ್ಟು 14950 ಪುಸ್ತಕಗಳ ಬೃಹತ್ ಸಂಗ್ರಹವನ್ನು ಹೊಂದಿದೆ. ಇದರ ಜೊತೆಗೆ ಸುಮಾರು 1,04,107 ರೂಪಾಯಿಯ ವಿವಿಧ ವಿಷಯಗಳ 870 ಸಂಪುಟಗಳನ್ನು ಅಳವಡಿಸಿದ್ದೇವೆ. ಕಾಲೇಜು ಗ್ರಂಥಾಲಯವು ಪ್ರತಿ ವರ್ಷ ಒಂಭತ್ತು ದಿನಪತ್ರಿಕೆ ಮತ್ತು 52 ನಿಯತಕಾಲಿಕಗಳಿಗಾಗಿ ಒಟ್ಟು 30000 ರೂಪಾಯಿಗಳನ್ನು ವಿನಿಯೋಗಿಸುತ್ತದೆ.

ಗ್ರಂಥಾಲಯದ ಸದಸ್ಯರ ಅನುಕೂಲಕ್ಕಾಗಿ ವಿದ್ಯಾರ್ಥಿಗಳು ಹೆಚ್ಚು ಆಪ್ತತೆಯಿಂದ ಇಲ್ಲಿಯ ಮಾಹಿತಿಯನ್ನು ಪಡೆಯುದಕ್ಕಾಗಿ ನಾವು ಗ್ರಂಥಾಲಯದ ಸಂಪನ್ಮೂಲಗಳನ್ನು ಗಣಕೀಕೃತಗೊಳಿಸಿದ್ದೇವೆ. ಓದುಗರ ಅನುಕೂಲಕ್ಕಾಗಿ ಗಣಕೀಕೃತ ಪುಸ್ತಕ ಪಟ್ಟಿಯನ್ನು ಹೊರತರಲಾಗಿದೆ.

ಸಾಹಿತ್ಯ ಮತ್ತು ಸಾಹಿತ್ಯೇತರ ಪುಸ್ತಕಗಳನ್ನು **Dewey Decimal** ಪದ್ಧತಿಯಂತೆ ಹೊಸ ವಿಭಾಗೀಕರಣ ನಿಯಮದಂತೆ ಮರುಜೋಡಣೆಗೊಳಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಮತ್ತು ಎಲ್ಲಾ ಓದುಗರ ಅನುಕೂಲ, ಹಿತದ ದೃಷ್ಟಿಯಿಂದ ಗ್ರಂಥಾಲಯವನ್ನು ಹೆಚ್ಚು ಸುಸಜ್ಜಿತವಾಗಿ, ಆಧುನೀಕರಣಗೊಳಿಸಿರುವ ಗ್ರಂಥಾಲಯ ಮುಖ್ಯಸ್ಥರಾದ ಶ್ರೀ ಮೈಕಲ್ ಪಿಂಟೋ ಮತ್ತು ಸಹಾಯಕರಿಗೆ ಆಬಾರಿಯಾಗಿದ್ದೇನೆ.

ಪುಟ ಸಂಖ್ಯೆ 6

ಕ್ರೀಡಾ ವಿಭಾಗ: ನಮ್ಮ ಕಾಲೇಜು ಎಲ್ಲಾ ರೀತಿಯ ಆಟೋಟಗಳಿಗೆ ವಿಫುಲವಾದ ಅವಕಾಶಗಳನ್ನು ಒದಗಿಸುತ್ತದೆ. ಪ್ರಸ್ತುತ ವರ್ಷದಲ್ಲಿ ರಾಕೇಶ್ ತೃತೀಯ ಬಿ.ಕಾಂ ಹಾಗೂ ಜೊಯ್‌ಲಿನ್ ಮೆಂಡೋನ್ಸಾರವರು ಕ್ರೀಡಾ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಮೃತ್ ಜೆ. ಶೆಟ್ಟಿ, ತೃತೀಯ ಬಿ.ಕಾಂ. ಸೆಫ್ವನ್ ಶೇಕ್ ತೃತೀಯ ಬಿಕಾಂ, ವಿಶ್ವಿತ್ ಶೆಟ್ಟಿ ತೃತೀಯ ಬಿ.ಎ ಮತ್ತು ಶಶಿಕುಮಾರ್ ತೃತೀಯ ಬಿ.ಎ. ಇವರುಗಳು ಹುಡುಗರ ವಿಭಾಗದಲ್ಲಿ ಹೌಸ್‌ಲೀಡರ್‌ಗಳಾಗಿದ್ದಾರೆ. ರೇಶ್ಮಾ ಕೆ. ತೃತೀಯ ಬಿ.ಎ., ಸೌಮ್ಯ ತೃತೀಯ ಬಿ.ಕಾಂ, ಸರಿತಾ ತೃತೀಯ ಬಿ.ಕಾಂ., ಹಾಗೂ ಪ್ರಶಾಂತಿ ಶೆಟ್ಟಿ ತೃತೀಯ ಬಿ.ಎ. ಇವರು ಮಹಿಳೆಯರ ವಿಭಾಗದಲ್ಲಿ ಹೌಸ್‌ಲೀಡರ್‌ಗಳಾಗಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯ ಅಂತರ್ ಕಾಲೇಜ್ ಮಟ್ಟದ ಗುಡ್ಡಗಾಡು ಓಟ, ಟೇಬಲ್ ಟೆನ್ನಿಸ್, ವಾಲಿಬಾಲ್ ಬಾಸ್ಕೆಟ್‌ಬಾಲ್ ಓಟ ಹಾಗೂ ಅಥ್ಲೆಟಿಕ್ಸ್‌ಗಳಲ್ಲಿ ನಮ್ಮ ಕಾಲೇಜಿನ ತಂಡಗಳು ಭಾಗವಹಿಸಿವೆ. ಜೊಯ್‌ಲಿನ್ ಮೆಂಡೋನ್ಸಾ ತೃತೀಯ ಬಿ.ಎ. ಇವರು ಹೇಪ್ಟಾತ್ಲಾನ್ ಸ್ಪರ್ಧೆಯಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ನಮ್ಮ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರನ್ನು ಅಭಿನಂದಿಸಲು ನನಗೆ ಹೆಮ್ಮೆಯೆನಿಸುತ್ತದೆ. ಡಿಸೆಂಬರ್ 18, 2008ರಂದು ನಡೆದ ವಾರ್ಷಿಕ ಕ್ರೀಡಾಕೂಟವು ಶ್ರೀ ಪ್ರಕಾಶ್ ಶೆಟ್ಟಿ ಮಾಜಿ ಹೈಜಂಪ್ ಚಾಂಪಿಯನ್ ಇವರಿಂದ ಉದ್ಘಾಟನೆಗೊಂಡು, ರೋಟೆರಿಯನ್ ಜೆರಾಲ್ಡ್ ಮಿನೇಜಸ್‌ರವರಿಂದ ಸಮಾರೋಪಗೊಂಡಿತು. ರೆಕ್ಸನ್ ಡಿ'ಸೋಜ ಪ್ರಥಮ ಬಿ.ಕಾಂ., ಹಾಗೂ ಜೊಯ್‌ಲಿನ್ ಮೆಂಡೋನ್ಸಾ ತೃತೀಯ ಬಿ.ಎ., ವೈಯಕ್ತಿಕ ಚಾಂಪಿಯನ್‌ಗಳಾಗಿರುತ್ತಾರೆ.

ಸೆಪ್ಟೆಂಬರ್ 18, 2008ರಂದು ಮಂಗಳೂರು ವಿಶ್ವವಿದ್ಯಾನಿಲಯ ಅಂತರ್ ಕಾಲೇಜ್ ಟೇಬಲ್ ಟೆನ್ನಿಸ್ ಟೂರ್ನಮೆಂಟ್‌ನ್ನು ಪುರುಷರು ಹಾಗು ಮಹಿಳೆಯರಿಗಾಗಿ ನಮ್ಮ ಕಾಲೇಜಿನಲ್ಲಿ ಏರ್ಪಡಿಸಲಾಯಿತು. ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಒಟ್ಟು 35 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು.
ಈ ಪಂದ್ಯಾವಳಿಯು ದ.ಕ. ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಯುತ ಸುಚರಿತಾ ಶೆಟ್ಟಿಯವರಿಂದ ಉದ್ಘಾಟಿಸಲ್ಪಟ್ಟಿತ್ತು. ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯ ಶ್ರೀ ರಾಜೇಶ್ ಕುಡ್ವ ಇವರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ನಮ್ಮ ಸಂಸ್ಥೆಯ ಸಂಚಾಲಕರಾದ ರೆ.ಫಾ. ಪೌಲ್‌ಪಿಂಟೊ ಅಧ್ಯಕ್ಷತೆಯವನ್ನು ವಹಿಸಿದ್ದರು. ಸಮಯಕ್ಕೆ ಸರಿಯಾಗಿ ಮತ್ತು ಅತ್ಯಂತ ವ್ಯವಸ್ಥಿತವಾಗಿ ನಡೆದ ಈ ಪಂದ್ಯಾಟಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾದವು. ಈ ಯಶಸ್ಸಿಗೆ ಮುಖ್ಯ ಕಾರಣಕರ್ತರಾದ ನಮ್ಮ ಕ್ರೀಯಾಶೀಲ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಜೇಮ್ಸ್ ಒಲಿವರ್ ಇವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ.

<u>ಎನ್.ಸಿ.ಸಿ. – ರಾಷ್ಟ್ರೀಯ ನೌಕದಳ:</u> ನಮ್ಮ ಕಾಲೇಜಿನ ಎನ್.ಸಿ.ಸಿ. ನೌಕಾದಳವು 50 ಕೆಡೆಟ್‌ಗಳನ್ನು ಒಳಗೊಂಡಿದೆ. ಇದರಲ್ಲಿ 33 ಜನ ವಿದ್ಯಾರ್ಥಿಗಳು ಹಾಗೂ 17 ಜನ ವಿದ್ಯಾರ್ಥಿನಿಯರು ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ.

ಪುಟ ಸಂಖ್ಯೆ 7

ಎನ್‌ಸಿಸಿ ಅಧಿಕಾರಿ ಸಬ್‌ಲೆಫ್ಟಿನೆಂಟ್ ಪುರುಷೋತ್ತಮ ಕೆ.ವಿ.ಯವರ ಮಾರ್ಗದರ್ಶನದಲ್ಲಿ ಹಿರಿಯ ಕೆಡೆಟ್‌ಗಳಾದ ಕೆಡೆಟ್ ಕ್ಯಾಪ್ಟನ್ ರಾಜೇಶ್ ಶೆಟ್ಟಿಗಾರ್, ಪಿ.ಒ. (**P.O.**) ಕೆಡೆಟ್‌ಗಳಾದ ರೋಯ್‌ಸ್ಟನ್ ಡಿಸೋಜ, ಶರೋನ್ ತೌರೊ ಮತ್ತು ಜೋಯ್‌ಲಿನ್ ಮೆಂಡೋನ್ಸ ಇವರು ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎನ್‌ಸಿಸಿ ಅಧಿಕಾರಿ ಸಬ್‌ಲೆಫ್ಟಿನೆಂಟ್ ಪುರುಷೋತ್ತಮ ಕೆ.ವಿ., ಇವರು ವಿಶಾಖಪಟ್ಟಣದಲ್ಲಿ ದಿನಾಂಕ 4–09–08 ರಿಂದ 15–09–08ರ ವರೆಗೆ ಜರಗಿದ **All India Nav Sainik** ಶಿಬಿರದಲ್ಲಿ ಕರ್ನಾಟಕ–ಗೋವಾ ಡೈರೆಕ್ಟೊರೇಟ್ ಇದರ ಪ್ರತಿನಿಧಿಯಾಗಿ 40 ಕೆಡೆಟ್‌ಗಳೊಂದಿಗೆ ಭಾಗವಹಿಸಿದ್ದಾರೆ. ಎನ್.ಸಿ.ಸಿ. ಲೀಡಿಂಗ್ ಕೆಡೆಟ್‌ಗಳಾದ ಪ್ರವೀಣ್ ದ್ವಿತೀಯ ಬಿ.ಕಾಂ., ದಿಶಾಂತ್ ಶೆಟ್ಟಿ ದ್ವಿತೀಯ ಬಿ.ಕಾಂ. ಹಾಗೂ ಮೃಣಾಲಿ ಶೆಟ್ಟಿ ದ್ವಿತೀಯ ಬಿ.ಕಾಂ ಇವರು ದಿನಾಂಕ 27–08–08ರಿಂದ 07–09–08ರ ವರೆಗೆ ಪಶ್ಚಿಮಬಂಗಾಲದ ಅಸನ್ಸೊಯಿಯಲ್ಲಿ ಜರುಗಿದ ರಾಷ್ಟ್ರೀಯ ಏಕತಾ ಶಿಬಿರದಲ್ಲಿ ಭಾಗವಹಿಸಿದ್ದಾರೆ ಹಾಗೂ **Rout March** (ಪಥ ಸಂಚಲನ) ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಪ್ರಥಮ ಬಿ.ಬಿ.ಎಂ., ತರಗತಿಯ ನಿಶ್ಚಿತಾ ಜೆ. ಇವರು ಗೋವಾದಲ್ಲಿ ಜರುಗಿದ ರಾಷ್ಟ್ರಮಟ್ಟದ ತರಬೇತಿ ಶಿಬಿರದಲ್ಲಿ ಭಾಗವಹಿಸಿರುತ್ತಾರೆ. ಇವರೆಲ್ಲರೂ ಅಭಿನಂದನಾರ್ಹರು.

ಕೆ.ಎಂ.ಸಿ. ಆಸ್ಪತ್ರೆ ಮಂಗಳೂರು ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಕಿನ್ನಿಗೋಳಿಯಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ನಮ್ಮ ಕೆಡೆಟ್‌ಗಳು ಭಾಗವಹಿಸಿ, ರಕ್ತದಾನ ಮಾಡಿದ್ದಾರೆ. ಕಾಲೇಜಿನ ಆವರಣದಲ್ಲಿ ಗಿಡ ನೆಡುವುದರ ಮೂಲಕ ವನಮಹೋತ್ಸವವನ್ನು ಆಚರಿಸಲಾಗಿದೆ. ಮಂಗಳೂರು ಗ್ರೂಫ್‌ನ ವಿಭಾಗದಲ್ಲಿ ನಡೆದ ಬೇರೆ ಬೇರೆ ತರಬೇತಿ ಶಿಬಿರಗಳಲ್ಲಿ 27 ಕೆಡೆಟ್‌ಗಳು ಭಾಗವಹಿಸಿರುತ್ತಾರೆ. ಈಜುಗಾರಿಕೆ, ದೋಣಿ ನಡೆಸುವಿಕೆ, ಶಸ್ತ್ರ ತರಬೇತಿ, ಕವಾಯತು, ವ್ಯಾಯಾಮ ಮುಂತಾದ ತರಬೇತಿಗಳನ್ನು ಎನ್.ಸಿ.ಸಿ., ಕೆಡೆಟ್‌ಗಳು ಉಚಿತವಾಗಿ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಧೈರ್ಯ ಹಾಗೂ ಆತ್ಮವಿಶ್ವಾಸವನ್ನು ತುಂಬಲು ಚಾರಣ ಕಾರ್ಯಕ್ರಮಗಳನ್ನು ಸಹ ನಮ್ಮ ಘಟಕ ಆಯೋಜಿಸುತ್ತಿದೆ.

ರಾಷ್ಟ್ರೀಯ ಸೇವಾ ಯೋಜನೆ ಘಟಕ :

ಅತ್ಯಂತ ಚುರುಕಿನ, ಲವಲವಿಕೆಯ ಸುಮಾರು 120 ಜನ ಸ್ವಯಂಸೇವಕರನ್ನು ಹೊಂದಿರುವ ಎನ್.ಎಸ್.ಎಸ್. ಘಟಕದ ಕಾರ್ಯಕ್ರಮ ಅಧಿಕಾರಿ ಡಾ. ರಾಧಾಕೃಷ್ಣ ಭಟ್ ಎಂ., ಸಹ ಅಧಿಕಾರಿ ಪ್ರೊ. ಗುಣಾಕರ್ ಎಸ್., ಇವರು ಸಹಕರಿಸುತ್ತಿದ್ದಾರೆ.

ದ್ವಿತೀಯ ಕಲಾ ಪದವಿಯ ಲೆವಿನ್ ಮತ್ತು ದ್ವಿತೀಯ ಬಿ.ಬಿ.ಎಂ. ನ ಶರಣ್ಯ ಇವರು ವಿದ್ಯಾರ್ಥಿನಾಯಕರಾಗಿ ಸಮರ್ಥವಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಪ್ರಸಕ್ತ ವರ್ಷದಲ್ಲಿ ರಕ್ತದಾನ ಶಿಬಿರ, ಸ್ವಾತಂತ್ರ್ಯೋತ್ಸವ ಆಚರಣೆ, ಕ್ಯಾಂಪಸ್ ಕ್ಲೀನಿಂಗ್, ವನ ಮಹೋತ್ಸವ, ಕಾಲೇಜು ಹೂತೋಟದ ನಿರ್ವಹಣೆ ಇತ್ಯಾದಿ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಸರಕಾರಿ ಕಾಲೇಜು, ವಾಮದಪದವು ಇಲ್ಲಿನ ಶ್ರೀ ಹರಿಪ್ರಸಾದ್ ಶೆಟ್ಟಿ ಯವರು ನಾಯಕತ್ವದ ತರಬೇತಿ ನೀಡಿದ್ದಾರೆ. **Campus development committee** ಯ ಜತೆ ಸೇರಿ ಕಾಲೇಜಿನ ಸಮಗ್ರ ಆವರಣದ ನಿರ್ಮಲೀಕರಣವಾಗಿದೆ. ಕಾಲೇಜು ಮಾತ್ರವಲ್ಲದೇ ಐಕಳದ ದ.ಕ.ಜಿ.ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದು ದಿನದ

ಪುಟ ಸಂಖ್ಯೆ 8

ಶಿಬಿರದಲ್ಲಿ ಕ್ರೀಡಾಂಗಣದ ವಿಸ್ತರಣೆ, ನಿರ್ಮಲೀಕರಣ, ವನಮಹೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಸ್ವಯಂ ಸೇವಕರು ಭಾಗವಹಿಸಿದ್ದಾರೆ. 16.11.2008 ರಿಂದ 22.11.2008 ರವರೆಗೆ ನೀರುಡೆಯ ಸೈಂಟ್ ಫ್ರಾನ್ಸಿಸ್ ಕ್ಸೇವಿಯಾರ್ ಹಿರಿಯ ಪ್ರಾ, ಶಾಲೆಯಲ್ಲಿ ವಿಶೇಷ ವಾರ್ಷಿಕ ಶಿಬಿರ ನಡೆಯಿತು. ಕ್ರೀಡಾಂಗಣ ಆವರಣ ವಿಸ್ತರಣೆ, ನಿರ್ಮಲೀಕರಣ, ಆರೋಗ್ಯ ಜಾಗೃತಿ ಮುಂತಾದ ಕಾರ್ಯಕ್ರಮಗಳಲ್ಲಿ ನಮ್ಮ ಸ್ವಯಂ ಸೇವಕರು ಬಹಳ ಉತ್ಸಾಹದಿಂದ ಪಾಲುಗೊಂಡರು. 2008 ರ ಮೇ ಯಲ್ಲಿ ಮಂಗಳಗಂಗೋತ್ರಿಯಲ್ಲಿ ನಡೆದ  ವಿ.ವಿ ಮಟ್ಟದ 10 ದಿನಗಳ ಶಿಬಿರದಲ್ಲಿ ನಮ್ಮ ಸ್ವಯಂ ಸೇವಕರಾದ ಲೆವಿನ್ ಮತ್ತು ಸಿಸ್ಟರ್ ವೀಣಾ ಶಾಂತಿ ವಾಸ್ ಇವರು ಭಾಗವಹಿಸಿದ್ದಾರೆ, ವಿ.ವಿ ಮಟ್ಟದ ಚಿಕುನ್ ಗುನ್ಯಾ ಜಾಗೃತಿ ಶಿಬಿರ, ಆರೋಗ್ಯ ಮಾಹಿತಿ ಶಿಬಿರ, ವಿಶ್ವ ಏಡ್ಸ್ ದಿನ ಮುಂತಾದ ಕಾರ್ಯಕ್ರಮಗಳಲ್ಲಿಯೂ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

ನಮ್ಮ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ , ನಾಯಕತ್ವ, ಸಂಘಟನೆ, ಬಡವರ ಬಗೆಗೆ ಅನುಕಂಪ, ದಯಾಪೂರ್ಣ ಸೇವೆಯ ಸ್ಪಂದನೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುವ ಎನ್‌ಎಸ್‌ಎಸ್ ಅಧಿಕಾರಿಗಳನ್ನು ಅಭಿನಂದಿಸಲು ಸಂತೋಷ ಪಡುತ್ತೇನೆ.

### ಸಮಾಜಶಾಸ್ತ್ರ ವಿಭಾಗದ ಚಟುವಟಿಕೆಗಳು

ಪ್ರೊ. ಯೋಗಿಂದ್ರ ಬಿ., ಇವರ ನೇತೃತ್ವದಲ್ಲಿ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಬಾಲ ಕಾರ್ಮಿಕ ವಿಷಯದ ಬಗ್ಗೆ ಅಂತರ್ ಕಾಲೇಜು ಭಾಷಣ ಸ್ಪರ್ಧೆಯು ತಾರೀಕು 22–08–08 ರಂದು ಜರಗಿತು. ಈ ಸ್ಪರ್ಧೆಯಲ್ಲಿ ಒಟ್ಟು ಹನ್ನೊಂದು ಕಾಲೇಜುಗಳು ಭಾಗವಹಿಸಿವೆ. ಈ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ವೀಣಾ ಶಾಂತಿ ವಾಸ್‌ರವರು ಪ್ರಥಮ ಸ್ಥಾನವನ್ನು ಕ್ರಾಸ್‌ಲ್ಯಾಂಡ್ ಕಾಲೇಜಿನ ಕು. ಸ್ವಪ್ನಾ ದ್ವಿತೀಯ ಸ್ಥಾನವನ್ನು ಮತ್ತು ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿಯ ಜಯಸುಧಾ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಸಂಘ ಮತ್ತು ಸಮಾಜಶಾಸ್ತ್ರ ವಿಭಾಗ, ಪೊಂಪೈ ಕಾಲೇಜು, ಐಕಳ ಇದರ ಸಂಯುಕ್ತ ಆಶ್ರಯದಲ್ಲಿ ಈ ಸ್ಪರ್ಧೆಯನ್ನು ನಡೆಸಲಾಯಿತು.

### ಏಡ್ಸ್ ಜಾಗೃತಿ ಸಪ್ತಾಹ

ಯುವಜನತೆಯಲ್ಲಿ ಏಡ್ಸ್ ಕುರಿತು ಅರಿವು ಮೂಡಿಸುವ ಸಲುವಾಗಿ ನಮ್ಮ ಕಾಲೇಜಿನ ಏಡ್ಸ್ ಅರಿವು ಕೇಂದ್ರ ಮತ್ತು "ಆಲ್ ಇಂಡಿಯಾ ಅಸೋಸಿಯೇಶನ್ ಫೋರ್ ಕ್ರಿಶ್ಚಿಯನ್ ಹೈಯರ್ ಎಜುಕೇಶನ್ ಇದರ ಜಂಟಿ ಆಶ್ರಯದಲ್ಲಿ ತಾರೀಕು 18–08–08 ರಿಂದ 22–08–08ರ ತನಕ ಏಡ್ಸ್ ಜಾಗೃತಿ ಸಪ್ತಾಹವನ್ನು ಆಚರಿಸಲಾಯಿತು. ಪ್ರೊ. ಯೋಗಿಂದ್ರ ಬಿ., ಇವರ ನೇತೃತ್ವದಲ್ಲಿ ನಡೆದ ಈ ಸಪ್ತಾಹದಲ್ಲಿ ಏಡ್ಸ್ ಕುರಿತು ಉಪನ್ಯಾಸ, ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಘೋಷಣೆ ಬರೆಯುವ, ಪೋಸ್ಟರ್ ರಚನೆ, ಪ್ರಹಸನ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

ಸಮಾಜದ ಹಲವಾರು ಗಣ್ಯ ವ್ಯಕ್ತಿಗಳು ಈ ಸಂದರ್ಭದಲ್ಲಿ ಭಾಗವಹಿಸಿ ಏಡ್ಸ್ ಕುರಿತ ಜಾಗೃತಿ ಸಪ್ತಾಹವನ್ನು ಯಶಸ್ವಿಗೊಳಿಸಿದ್ದಾರೆ. ಈಗ ನಮ್ಮ ಕಾಲೇಜು ಏಡ್ಸ್ ಅರಿವು ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರೊ ಯೋಗೀಂದ್ರರ ಸಂಘಟನೆ ಕಾರ್ಯ ಯೋಜನೆಗೆ ಅಭಿನಂದನೆಗಳು

ಪುಟ ಸಂಖ್ಯೆ 9

ಮಾನವಿಕ ಸಂಘ:

ನಮ್ಮ ಕಾಲೇಜಿನ ಮಾನವಿಕ ಸಂಘದ ಉದ್ಘಾಟನೆಯು ದಿನಾಂಕ 27–09–08ರಂದು ನೆರವೇರಿತು. ಸಂಘವನ್ನು ಮಡಂತ್ಯಾರು ಸೇಕ್ರೆಡ್ ಹಾರ್ಟ್ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶ್ಯಾಮ್‌ಭಟ್‌ರವರು ಉದ್ಘಾಟಿಸಿದರು. ನಂತರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ "ಬ್ಯಾಂಕಿಂಗ್ ಸೇವೆಗಳು" ಎಂಬ ವಿಷಯದ ಬಗ್ಗೆ ಸಂಘದ ಸದಸ್ಯರಿಗೆ ಸವಿವರವಾದ ಮಾಹಿತಿಯನ್ನು ನೀಡಿದರು. ಪ್ರೊ. ಯೋಗೀಂದ್ರ ಬಿ., ಇವರು ಸಂಘದ ಸಂಚಾಲಕರಾಗಿದ್ದಾರೆ.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ರೆಮೆಡಿಯಲ್ ತರಗತಿಗಳು

ಯುಜಿಸಿಯ ಸಹಕಾರದಿಂದ ನಮ್ಮ ಕಾಲೇಜಿನ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪರಿಹಾರರೂಪದ ವಿಶೇಷ ತರಗತಿಗಳನ್ನು ನಡೆಸುವ ಕಾರ್ಯವನ್ನು ಈ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲಾಗಿದೆ. ಸುಮಾರು 180 ರಷ್ಟು ವಿದ್ಯಾರ್ಥಿಗಳು ಈ ವರ್ಷ ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಸಂಸ್ಥೆಯ ಅಧ್ಯಾಪಕರುಗಳು ಈ ವಿಶೇಷ ತರಗತಿಗಳನ್ನು ನಡೆಸುತ್ತಿದ್ದಾರೆ. ತರಗತಿಗಳನ್ನು ನಡೆಸುವವರ ಗೌರವ ಸಂಭಾವನೆ ಹಾಗೂ ಪರಿಕಾರಗಳಿಗಾಗಿ ಯುಜಿಸಿಯು ವಿಶೇಷ ಆರ್ಥಿಕ ನೆರವನ್ನು ನೀಡುತ್ತಿದೆ. ಇದರ ನಿರ್ದೇಶಕರಾಗಿ ಅರ್ಥಶಾಸ್ತ್ರ ವಿಭಾಗದ ಡಾ. ರಾಧಾಕೃಷ್ಣ ಭಟ್ ಇವರು ವ್ಯವಸ್ಥಿತ ಮಾರ್ಗಸೂಚಿಯನ್ನು ರಚಿಸಿ ಯೋಜನೆಯ ಯಶಸ್ಸಿಗೆ ಕಾರಣರಾಗಿದ್ದಾರೆ.

ಇಂಗ್ಲಿಷ್ ಸ್ಪೀಕಿಂಗ್ ಕೋರ್ಸುಗಳು

ನಮ್ಮ ಹೆಚ್ಚಿನ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿದ್ದು, ಕನ್ನಡ ಮಾಧ್ಯಮದಲ್ಲಿ ಓದಿದವರು, ಇಂಗ್ಲಿಷ್‌ನಲ್ಲಿ ವ್ಯವಹರಿಸಲು ಕಷ್ಟವಾಗಿರುವ ಅಂತವರಿಗಾಗಿ ಇಂಗ್ಲಿಷ್ ಕಲಿಕಾ ತರಗತಿಗಳನ್ನು ನಡೆಸಲಾಗುತ್ತಿದೆ. ಫಾ ಎಲಿಯಾಸ್ ಡಿ'ಸೋಜರವರು ಇದರ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ವಾಣಿಜ್ಯ ಹಾಗೂ ಕಾರ್ಯನಿರ್ವಹಣ ಸಂಘ

ಈ ಸಂಘಟನೆಯು ಬಿ.ಕಾಂ. ಹಾಗೂ ಬಿ.ಬಿ.ಎಂ.ನ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಇದರ ಸದಸ್ಯರಿಗಾಗಿ 23ನೇ ಸೆಪ್ಟೆಂಬರ್ 2008ರಂದು ಕಿನ್ನಿಗೋಳಿಯ ಕೆನರಾಬ್ಯಾಂಕಿನ ಪ್ರಬಂಧಕರಾದ ಶ್ರೀ ಬಿ.ಎಸ್. ಭಂಡಾರಿಯವರಿಂದ **"Innovative Banking"** ಎಂಬ ವಿಷಯದ ಮೆಲೆ ಮಾಹಿತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಕನಿಷ್ಠ **Zero Balence** ಖಾತೆಯನ್ನು ತೆರೆಯುವಂತೆ ಸೌಲಭ್ಯದ ಮಾಹಿತಿ ನೀಡಲಾಯಿತು ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ಈ ಖಾತೆಯ ಉಪಯೋಗವನ್ನು ಪಡೆಯುತ್ತಿದ್ದಾರೆ.

ಮಧ್ಯಾಹ್ನದ ಬಿಸಿಯೂಟ:

ದೂರ ದೂರದ ಹಳ್ಳಿ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವ. ಫಾ. ವಲೇರಿಯನ್ ಮೆಂಡೋನ್ಸರವರು 2004 ರಲ್ಲಿ ಕಾಲೇಜಿನಲ್ಲಿ ಮಧ್ಯಾಹ್ನದ ಬಿಸಿ ಊಟದ ಯೋಜನೆಯನ್ನು ಆರಂಬಿಸಿದರು. ಅನೇಕ ವಿದ್ಯಾರ್ಥಿಗಳು ಈಗಾಗಲೇ ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಪ್ರಸಕ್ತ ವರ್ಷದಲ್ಲಿ ಸುಮಾರು 60 ಜನ ಬಡ ವಿದ್ಯಾರ್ಥಿಗಳು ಪೂರ್ಣ ಉಚಿತ ಊಟದ ಸೌಲಭ್ಯವನ್ನು ಪಡೆದಿದ್ದಾರೆ. 35 ಜನ ವಿದ್ಯಾರ್ಥಿ ಅರ್ಧ ಎಂದರೆ 4.00 ರೂಪಾಯಿ ಪಾವತಿಸಿ ಊಟವನ್ನು ಪಡೆಯುತ್ತಿದ್ದಾರೆ. 11 ಜನ ವಿದ್ಯಾರ್ಥಿಗಳಿಗೆ ಕೆಲವು ಉಪನ್ಯಾಸಕರ ಪ್ರಾಯೋಜಕತ್ವದಲ್ಲಿ ಉಚಿತ ಊಟ ನೀಡಲಾಗುತ್ತಿದೆ. 57 ಜನ ವಿದ್ಯಾರ್ಥಿಗಳು ಪೂರ್ಣ ಪಾವತಿಸಿ ಊಟದ ಅನುಕೂಲವನ್ನು ಪಡೆಯುತ್ತಿದ್ದಾರೆ. ಈ ಉಚಿತ ಊಟದ ವ್ಯವಸ್ಥೆಗೆ ಕಾಲೇಜಿನ ರಕ್ಷಕ – ಶಿಕ್ಷಕ ಸಂಘದ ಸದಸ್ಯ ತಲಾ 100 ರೂಪಾಯಿ ಯಂತೆ ನೀಡಿರುವುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಪ್ರೊ. ಜೇಮ್ಸ್ ಒಲಿವರ್ ಇವರ ನೇತೃತ್ವದಲ್ಲಿ ಈ ಊಟದ ವ್ಯವಸ್ಥೆ ಅತ್ಯಂತ ಸ್ವಚ್ಛ ಮತ್ತು ದಕ್ಷತೆಯಿಂದ ಸಾಗುತ್ತಿದೆ.

ಪ್ರಜ್ಞಾ ಭಿತ್ತಿ ಪತ್ರಿಕೆ :

ಲೇಖನ, ಕಥೆ, ಕವನ , ಹನಿಗವನ, ಚಿತ್ರಕಲೆ ಮುಂತಾದ ಪ್ರತಿಭೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಸೂಕ್ತವಾದ ಬೆಂಬಲವನ್ನು ನೀಡುವ ಉದ್ದೇಶದಿಂದ ನಮ್ಮಲ್ಲಿ 'ಪ್ರಜ್ಞಾ' ಭಿತ್ತಿಪತ್ರಿಕೆ ಇದೆ. ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ನೇಮಿಚಂದ್ರ ಗೌಡ ಇವರ ನೇತೃತವದಲ್ಲಿ ಈ ಶೈಕ್ಷಣಿಕ ವರ್ಷವಿಡೀ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ, ಈ ಮೂಲಕ ವಿದ್ಯಾರ್ಥಿಗಳಿಗೆ ಸರ್ವಾಂಗೀಣ ಬೆಳವಣಗೆಗಾಗಿ, ವಿದ್ಯಾರ್ಥಿಗಳ ಪ್ರತಿಭೆಯ ಅಭಿವ್ಯಕ್ತಿಗೆ ಸೂಕ್ತವಾದ ವೇದಿಕೆಯನ್ನು ಇಲ್ಲಿ ಕಲ್ಪಿಸಲಾಗಿದೆ. ಬರೆಯುವ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಒಂದೊಂದು ವಾರ, ಒಂದೊಂದು ತರಗತಿಯ ವಿದ್ಯಾರ್ಥಿಗಳು ಸಕಾಲಿಕ ಬರಹಗಳ ಮೂಲಕ ಗಮನ ಸೆಳೆಯುತ್ತಿದ್ದಾರೆ. ಬಹುಮಾನ ಘೋಷಿಸಿ ಬರವಣಿಗೆಗೆ ಪ್ರೋತ್ಸಾಹ ನೀಡಲಾಗಿದೆ.

ಮಹಿಳಾ ಸಂಘ :

ಮಹಿಳಾ ಸಂಘವು ತಾ. 23 ಜುಲೈ 2008 ರಂದು ಶ್ರೀಮತಿ ಜ್ಯೋತಿ ಕಾಮತ್ ರವರ ಸಂಯೋಜಕತ್ವದಲ್ಲಿ ಪ್ರೊ. ಹಿಲ್ಡಾ ರೋಡ್ರೀಗಸ್ ಇವರಿಂದ ಉದ್ಘಾಟನೆಗೊಂಡಿತು. ಇದರ ಆಶ್ರಯದಲ್ಲಿ ದಿನಾಂಕ 27 ಅಗಸ್ಟ್ 2008 ರಂದು ಕೊಲಾಜ್ ಸ್ಪರ್ಧೆಯನ್ನು ಕಾಲೇಜಿನ ವಿದ್ಯಾರ್ಥಿನಿಯರಿಗಾಗಿ ಹಾಗೂ ದಿನಾಕ 14 ಸಪ್ಟೆಂಬರ್ 2008 ರಂದು ಚಿತ್ರಲೇಖನ ಸ್ಪರ್ಧೆಯನ್ನು ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿತ್ತು. ದಿನಾಂಕ 3 ನವೆಂಬರ್ 2008 ರಿಂದ ಸಂಘದ ಸಂಯೋಜಕತ್ವವನ್ನು ಕುಮಾರಿ ಭವ್ಯ ವಹಿಸಿಕೊಂಡಿರುತ್ತಾರೆ.

ಲಲಿತ ಕಲಾ ಸಂಘ :

ನಮ್ಮ ಕಾಲೇಜಿನ ಲಲಿತಾ ಕಲಾ ಸಂಘವು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪ್ರೊ. ಗೋವಿಂದ ಭಟ್ ಕೆ., ಇವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನೀಡಿದೆ, ಪೊಂಪೈ ದಿನಾಚರಣೆಯಂದು ವಿವಿಧ ತರಗತಿಗಳಿಂದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿ ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಅರಿವನ್ನು ಮೂಡಿಸಲಾಗಿದೆ.

ಕಂಪ್ಯೂಟರ್ ವಿಭಾಗ :

ನಮ್ಮಲ್ಲಿ ಒಟ್ಟು 20 ಕಂಪ್ಯೂಟರ್‌ಗಳಿದ್ದು ಸುಮಾರು 169 ಜನ ವಿದ್ಯಾರ್ಥಿಗಳು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. **DTP, E – Office, E – Finance** ಕೋರ್ಸ್‌ಗಳ ಸೌಲಭ್ಯ ಲಭ್ಯವಿದೆ. **Network, Internet, Multimedia, LCD Projector** ಮುಂತಾದ ಸೌಲಭ್ಯಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒದಗಿಸಲಾಗಿದೆ. ಶ್ರೀಮತಿ ಸಿಲ್ವಿಯಾ ಪ್ರ್ಯಾಸ್ ಮತ್ತು ಶ್ರೀ ರೋಶನ್ ಮನೋಜ್ ಡಿ'ಸೋಜ ರವರು ಅತ್ಯಂತ ಜವಾಬ್ದಾರಿಯಿಂದ ಎಲ್ಲರಿಗೂ ಸಹಕರಿಸಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶಿಕ್ಷಕ – ರಕ್ಷಕ ಸಂಘ 2008–09 :

ಶಿಕ್ಷಕ – ರಕ್ಷಕ ಸಂಘದ ಸಾಮಾನ್ಯ ಸಭೆಯು ಅಗಸ್ಟ್ 8, 2008 ರಂದು ಜರುಗಿತು. ಸಂಸ್ಥೆಯ ಸಂಚಾಲಕರಾದ ರೆ. ಫಾ. ಫೌಲ್ ಪಿಂಟೊ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. 2008 –09 ರ ಸಾಲಿನ ಶಿಕ್ಷಕ –ರಕ್ಷಕ ಸಂಘದ ಕಾರ್ಯಾಕಾರಿ ಸಮಿತಿಯನ್ನು ಆಯ್ಕೆ ಮಾಡಲು ಚುನಾವಣೆಯನ್ನು ನಡೆಸಲಾಯಿತು. ಶ್ರೀ ಹರಿಶ್ಚಂದ್ರ ಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿಯೂ , ಶ್ರೀಮತಿ ನ್ಯಾನ್ಸಿ ಪಿಂಟೊರವರನ್ನು ಸಹ ಕಾರ್ಯದರ್ಶಿಯನ್ನಾಗಿಯೂ, ಶ್ರೀ ಕೆ.ಪಿ ಅಬ್ದುಲ್ ಖಾದರ್, ಶ್ರೀ ಮುರಳೀಧರ್ ಶೆಟ್ಟಿ, ಶ್ರೀ ಉದಯ್ ಕುಮಾರ್ ಶೆಟ್ಟಿ, ಶ್ರೀ ನಾರಾಯಣ್ ಮೂಲ್ಯ, ಶ್ರೀಮತಿ ಯಮುನಾಕ್ಷಿ, ಶ್ರೀ ಬ್ಯಾಪ್ಟಿಸ್ಟ್ ಡಿಸೋಜಾ ಇವರನ್ನು ವಿದ್ಯಾರ್ಥಿಗಳ ಹೆತ್ತವರ ಪರವಾಗಿ ಸದಸ್ಯರನ್ನಾಗಿ ಆರಿಸಿದರು.

ಈ ಸಂಘದ ಉಪಾಧ್ಯಕ್ಷರಾಗಿ ಡಾ. ರಾಧಾಕೃಷ್ಣ ಭಟ್, ಕಾರ್ಯದರ್ಶಿಯಾಗಿ ಪ್ರೊ. ಬಿ. ಹೆರಾಲ್ಡ್ ಡಿಸೋಜಾ, ಖಜಾಂಜಿಯಾಗಿ ಶ್ರೀ ರೋಕಿ ಜಿ. ಲೋಬೊ, ಸದಸ್ಯರಾಗಿ ಪ್ರೊ. ಜನಾರ್ಧನ್, ಶ್ರೀ ಮೈಕಲ್ ಪಿಂಟೊ, ಶ್ರೀ ಜೇಮ್ಸ್ ಒಲಿವರ್, ಕು. ಭವ್ಯ, ಶ್ರೀ ಜೋಸ್ಸಿ ಡಿಸೋಜಾ, ಪ್ರೊ. ನೇಮಿಚಂದ್ರ ಗೌಡ ಅವರನ್ನು ಕಾಲೇಜಿನ ಶಿಕ್ಷಕರ ಪರವಾಗಿ ನೇಮಿಸಲಾಯಿತು. 425 ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹೆತ್ತವರು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಕಾಲೇಜು ಹಾಗೂ

ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಲು ನಿರ್ಧರಿಸಿದ ಸದಸ್ಯರು ಬಡ ಹಾಗೂ ದೂರದಿಂದ ಬರುವ ವಿದ್ಯಾರ್ಥಿಗಳ ಮಧ್ಯಾಹ್ನದ ಊಟದ ಯೋಜನೆಗೆ ತಮ್ಮ ಕೊಡುಗೆಯಾಗಿ ತಲಾ 100 ರೂ. ಧನ ಸಹಾಯ ನೀಡಲು ನಿರ್ಧರಿಸಲಾಯಿತು. ಶಿಕ್ಷಕ ರಕ್ಷಕ ಸಂಘವು ಕಾಲೇಜಿನ ಎಲ್ಲಾ ಚಟುವಟಿಕೆಗಳಲ್ಲಿಯೂ ತಮ್ಮ ತುಂಬು ಹೃದಯದ ಪ್ರೋತ್ಸಾಹವನ್ನು ನೀಡುತ್ತಿದೆ ಅವರಿಗೆ ವಂದನೆಗಳು.

ಹಿರಿಯ ವಿದ್ಯಾರ್ಥಿ ಸಂಘ :

ಶ್ರೀ ರೋಕಿ ಜಿ. ಲೋಬೊ, ಅಧ್ಯಕ್ಷರು, ಶ್ರೀಮತಿ ಗ್ರೆಟ್ಟಾ ಮೋರಾಸ್, ಕಾರ್ಯದರ್ಶಿ, ಶ್ರೀ ಕೃಷ್ಣ ಸಾಲಿಯಾನ್, ಉಪಾಧ್ಯಕ್ಷರು, ಶ್ರೀ ರಾಜೇಶ್ ಕುಡ್ವ, ಜತೆ ಕಾರ್ಯದರ್ಶಿ, ಶ್ರಿ ಡೆನಿಸ್ ಫೆರ್ನಾಂಡಿಸ್, ಖಜಾಂಚಿ, ಪ್ರೊ. ಬಿ. ಹೆರಾಲ್ಡ್ ಡಿ'ಸೋಜ ಮತ್ತು ಶ್ರೀ ಮೈಕಲ್ ಪಿಂಟೊರವರು ಕನ್ವಿನರ್ ಆಗಿದ್ದಾರೆ. ಕಾಲೇಜಿನ ಎಲ್ಲಾ ಚಟುವಟಿಕೆಗಳಿಗೂ ತುಂಬು ಹೃದಯದ ಪ್ರೋತ್ಸಾಹ ನೀಡುತ್ತಿದ್ದಾರೆ. ವಿದ್ಯಾರ್ಥಿಗಳ ಬಿಸಿಯೂಟದ ಯೋಜನೆಗೆ ಸಹಕಾರ ನೀಡುವುದಲ್ಲದೇ, ಕಾಲೇಜು ಆಯೋಜಿಸಿದ ವಿವಿ ಮಟ್ಟದ ಟೇಬಲ್ ಟೆನ್ನಿಸ್ ಸ್ಪರ್ಧೆಗಳ ಸಂದರ್ಭದಲ್ಲಿ ಸಹಕಾರ ಸ್ಮರಣೀಯ.

ಪುಟ ಸಂಖ್ಯೆ 12

**AICUF 2008-09 :**

ನಮ್ಮ ಕಾಲೇಜಿನ 'ದಿ ಆಲ್ ಇಂಡಿಯಾ ಕಥೊಲಿಕ್ ಯುನಿವರ್ಸಿಟಿ ಫೆಡರೇಶನ್ ಯುನಿಟ್' ಯಶಸ್ವಿ ಎರಡನೇ ವರ್ಷಕ್ಕೆ ಕಾಲಿರಿಸಿದೆ. ಜುಲೈ 9, 2008 ರಂದು ರೆ.ಫಾ ಎಲಿಯಾಸ್ ಡಿಸೋಜಾರವರು ಇದನ್ನು ಉದ್ಘಾಟಿಸಿ ಮಾರ್ಗದರ್ಶನ ನೀಡುತ್ತಿದ್ದಾರೆ.

ಇದರ ಅಧ್ಯಕ್ಷರನ್ನಾಗಿ **Sharon Tauro**, ಕಾರ್ಯದಶಿಯಾಗಿ ಲೋರೆನ್ಸ್ ಲೋಬೊ, ಖಜಾಂಜಿಯಾಗಿ ಲ್ಯಾನಲ್ ಆಂದ್ರಾದೆ ಇವರನ್ನು 2008 –09 ಅವಧಿಗೆ ಆಯ್ಕೆ ಮಾಡಲಾಗಿದೆ. ವಿವಿಧ ವಿಷಯಗಳ ಚರ್ಚೆಗಾಗಿ ಹಾಗೂ ಪವಿತ್ರ ಬಲಿಪೂಜೆ ಆಚರಣೆಗಾಗಿ ಇದರ ಸದಸ್ಯರೆಲ್ಲರೂ ನಿರಂತರವಾಗಿ ಒಟ್ಟು ಸೇರುತ್ತಿದ್ದಾರೆ. ಮುಡಿಪು ಚರ್ಚಿನ ಧರ್ಮಗುರುಗಳಾದ ರೆ.ಫಾ ಆಂಡ್ರ್ಯೂ ಡಿ'ಸೋಜ, AICUF ನ ಸದಸ್ಯರಿಗಾಗಿ ವಾರ್ಷಿಕ ಪ್ರಾರ್ಥನಾ ಕೂಟವನ್ನು ಎರಡು ದಿನಗಳ ಕಾಲ ಪ್ರವಾಚಿಸಿದರು.

ಫಾತೀಮಾ ಪ್ರಾರ್ಥನಾ ಮಂದಿರ , ಮಂಗಳೂರಿನಲ್ಲಿ ಕರ್ನಾಟಕ AICUF ವತಿಯಿಂದ ನವೆಂಬರ್ 27, 28, 29, 2008 ರಂದು ನಡೆದ ರಾಷ್ಟ್ರೀಯ ಮಟ್ಟದ ಸೆಮಿನಾರ್‌ನಲ್ಲಿ ನಮ್ಮ AICUF ನ ಐದು ಮಂದಿ ಸದಸ್ಯರು ಭಾಗವಹಿಸಿರುತ್ತಾರೆ. ಕ್ರಿಸ್ ಮಸ್ ಹಬ್ಬದ ಸುಸಂಧರ್ಭದಲಿ AICUF ನ ಸದಸ್ಯರು ಸುಂದರವಾದ ಗೋದೂಳಿ ಮತ್ತು ನಕ್ಷತ್ರವನ್ನು ನಿರ್ಮಿಸಲಾಗಿದೆ, ಹಾಗೂ ಇದೇ ಸಂಧರ್ಭದಲ್ಲಿ ತರಗತಿವಾರು ನಕ್ಷತ್ರ ಸ್ಪರ್ಧೆಯನ್ನು ಏರ್ಪಡಿಸಿದರು. ಅಂತೆಯೇ ಮುಂಬರುವ ದಿನಗಳಲ್ಲಿ ವೃದ್ಧಾಶ್ರಮಕ್ಕೆ ಭೇಟಿ ಹಾಗೂ ವೃತ್ತಿ ತರಬೇತಿಯ ಕಾರ್ಯಗಾರವನ್ನು ನಡೆಸಲು ತೀರ್ಮಾನಿಸಲಾಯಿತು

AICUF ನ ನಿರ್ದೇಶಕರಿಗೆ ಧನ್ಯವಾದ ಹೇಳುತ್ತಾ AICUF ನ ಉದ್ದೇಶವಾದ ಪ್ರಾರ್ಥನೆ ಮತ್ತು ಸೇವೆಗಳಿಗೆ ಶುಭಾಶಯಗಳನ್ನು ಕೋರುತ್ತೇನೆ.

**ಆಂತರಿಕ ಗುಣಮಟ್ಟ ಭರವಸೆ ಕೇಂದ್ರ (IQAC) :**

ಇದು ನ್ಯಾಕ್‌ನ ಅಧೀನ ಅಂಗ. 01.12.2007 ರಲ್ಲಿ ಉಪನ್ಯಾಸಕ ಹಾಗೂ ಉಪನ್ಯಾಸಕೇತರರಿಗೆ 'ಸ್ಟ್ರೆಸ್ ಮೇನೇಜ್ ಮೆಂಟ್'ನಲ್ಲಿ ಶ್ರೀ ರೋಕಿ ನಿಕೋಲಸ್ ನೊರೋನ್ಹಾ ಇವರು ಒಂದು ದಿನದ ಕಾರ್ಯಾಗಾರ ನಡೆಸಿದರು.

ದಿನಾಂಕ 01.04.2008 ರಿಂದ 07.04.2008 ರವರೆಗೆ ಕಾಲೇಜಿನ ಉಪನ್ಯಾಸಕ ಹಾಗೂ ಉಪನ್ಯಾಸಕೇತರ ವೃಂದದವರಿಗೆ 'ಕಂಪ್ಯೂಟರ್ ತರಬೇತಿ' ಯನ್ನು ಶ್ರೀಮತಿ ಪುಷ್ಪಲತಾ ರವರು ನಡೆಸಿಕೊಟ್ಟರು. ವಿದ್ಯಾರ್ಥಿಗಳಿಗೆ ಪುಸ್ತಕ ಓದುವಿಕೆಯಲ್ಲಿ ಆಸಕ್ತಿ ಮೂಡಿಸಲು, ಪ್ರತಿ ವಿದ್ಯಾರ್ಥಿ ಕನಿಷ್ಟ ಎರಡು ಪುಸ್ತಕಗಳನ್ನು ಓದಿ ಅದರ ಬಗ್ಗೆ ವಿಮರ್ಶೆ ಬರೆದು ಕೊಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಕಾರ್ಯ ಯೋಜನೆಯನ್ನು ಪ್ರಸ್ತುತ ಸೆಮಿಸ್ಟರ್ ನಿಂದ ಮುಂಬರುವ ಸೆಮಿಸ್ಟರ್‌ವರೆಗೆ ವಿಸ್ತರಿಸಲಾಗಿದೆ.

ದಿನಾಂಕ : 6.8.2008 ರಂದು ದೃತಿ ಫೌಂಡೇಶನ್ ಮತ್ತು ಪೊಂಪೈ ಕಾಲೇಜು ಜಂಟಿಯಾಗಿ 'ಪರಿಣಾಮಕಾರಿ ಭೋಧನೆ' ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು ಉಪನ್ಯಾಸಕರಿಗೆ ಆಯೋಜಿಸಲಾಗಿತ್ತು. ಇದನ್ನು ದೃತಿ ಫೌಂಡೇಶನ್‌ನ ಧರ್ಮದರ್ಶಿಯಾದಂತಹ ಶ್ರೀ ವಿ.ಕೆ. ತಾಳಿತ್ತಾಯರವರು ನಡೆಸಿಕೊಟ್ಟರು. ದಿನಾಂಕ 20.9.2008 ರಂದು

ಪುಟ ಸಂಖ್ಯೆ 13

ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಒಂದು ದಿನದ 'ಪುನರ್ ಮನನ' ಕಾರ್ಯಗಾರವನ್ನು ಪ್ರೊ. ಪ್ರವೀಣ್, ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ ಇವರು ನಡೆಸಿಕೊಟ್ಟರು, ಈ ಎಲ್ಲಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ IQAC ಯ ನಿರ್ದೇಶಕ ರಾಜ್ಯಶಾಸ್ತ್ರ ವಿಭಾಗದ ಪ್ರೊ. ಜನಾರ್ಧನನ್ ಪಿ. ಉತ್ತಮ ಸಂಘಟಕರಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇತರ ಮುಖ್ಯ ವಿಚಾರಗಳು :

ವಿದ್ಯಾರ್ಥಿಗಳಿಗೆ ದೊರೆತ ವಿದ್ಯಾರ್ಥಿ ವೇತನಗಳು

1. ಪ್ರತಿಭಾನ್ವಿತ ವಿದ್ಯಾರ್ಥಿವೇತನ ಮೊತ್ತ ರೂ 24000 ಇದನ್ನು 12 ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡಿದ್ದಾರೆ.
2. ಭಾರತ ಸರಕಾರ ಒದಗಿಸಿರುವ ವಿದ್ಯಾರ್ಥಿವೇತನ 47085 ರೂಪಾಯಿಗಳು. 12 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ.
3. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಿರುವ ವಿದ್ಯಾರ್ಥಿ ವೇತನದ ಮೊತ್ತ 16600 ರೂಪಾಯಿಗಳು. 27 ವಿದ್ಯಾರ್ಥಿಗಳು ಇದರ ಫಲಾನುಭವಿಗಳಾಗಿದ್ದಾರೆ.
4. ಬೀಡಿ ಕಾರ್ಮಿಕರ ಮಕ್ಕಳಿಗೆ ಸುಮಾರು 2,29,440 ರೂಪಾಯಿ ಲಭಿಸಿದ್ದು, 98 ವಿದ್ಯಾರ್ಥಿಗಳು ಪಡೆದಿರುತ್ತಾರೆ.
5. ಜೆ.ಬಿ. ಪಿಂಟೊ, ಮೆಮೋರಿಯಲ್ ವಿದ್ಯಾಥಿವೇತನ ರೂ 21750.00 ನ್ನು 23 ವಿದ್ಯಾರ್ಥಿಗಳಿಗೆ ನೀಡಲಾಗಿದೆ.

ಒಟ್ಟು ಸುಮಾರು 4,01,875.00 ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಇದಕ್ಕೆ ಕಾರಣಕರ್ತರಾದ ಕಾಲೇಜು ಶಿಕ್ಷಣ ಇಲಾಖೆಯನ್ನು, ಇತರ ಸರಕಾರಿ ಇಲಾಖೆಗಳನ್ನು, ದಾನಿಗಳನ್ನು, ಸಂಘ ಸಂಸ್ಥೆಗಳನ್ನು ಅತ್ಯಂತ ಕೃತಜ್ಞತೆಯೊಂದಿಗೆ ಸ್ಮರಿಸುತ್ತೇವೆ.

ಮುಕ್ತಾಯ :

ಅತ್ಯಂತ ಕ್ರೀಯಾಶ್ರೀಲ ಸಾಧನೆ, ಚಟುವಟಿಕೆಗಳಿಂದ ಕೂಡಿದ ಈ ಕಾಲೇಜಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿರಿಸಿದ್ದೇನೆ. ಪೊಂಪೈ ಮಾತೆಯ ಆರ್ಶೀವಾದ ಮತ್ತು ಪರಮಾತ್ಮನ ಅನುಗ್ರಹದಿಂದ ನಾವು ಧನ್ಯರಾಗಿದ್ದೇವೆ. ಕಾಲೇಜಿನ ಸರ್ವತೋಮುಖ ಏಳಿಗೆಗೆ ಕಥೋಲಿಕ್ ಶಿಕ್ಷಣ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪೊಂಪೈ ಶಿಕ್ಷಣ ಸಂಸ್ಥೆಗಳ ಸಂಚಾಲಕರು ನೀಡುತ್ತಿರುವ ಸಹಕಾರವನ್ನು ಅತ್ಯಂತ ಕೃತಜ್ಞತೆಯೊಂದಿಗೆ ನೆನೆಯುತ್ತೇನೆ. ಇವರ ಸಲಹೆ ಸೂಚನೆಗಳು ಮತ್ತು ಮಾರ್ಗದರ್ಶನ, ಸಹೋದ್ಯೋಗಿ ಬಂಧುಗಳ ನಿರಂತರ ಸಹಕಾರ ಮತ್ತು ಪ್ರೋತ್ಸಾಹ; ಉತ್ಸಾಹಿ ಮತ್ತು ಆಸಕ್ತ ವಿದ್ಯಾರ್ಥಿವೃಂದ, ವಿದ್ಯಾರ್ಥಿಗಳ ಹೆತ್ತವರ ಮತ್ತು ರಕ್ಷಕರ ಸದ್ಭಾವನೆ, ಹಿರಿಯ ವಿದ್ಯಾರ್ಥಿಗಳ ಸಹಕಾರ, ಪರಿಸರದ ಶಿಕ್ಷಣ ಸಂಸ್ಥೆಗಳ ಬಂಧುಗಳ ಅಭಿಮಾನ ಮತ್ತು ಎಲ್ಲಾ ಸರಕಾರಿ ಕಛೇರಿಗಳ ಅಧಿಕಾರಿ ವರ್ಗದ ಮತ್ತು ಸಾರ್ವಜನಿಕರ ಉತ್ತಮ ಬಾಂಧವ್ಯ ಬಹಳಷ್ಟು ಸಹಾಯ ಮಾಡಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ.

ಎಲ್ಲರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ ಕಾಲೇಜು ಕಛೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ಅತ್ಯಂತ ಸುಸೂತ್ರವಾಗಿ ಮತ್ತು ಪರಿಣಾಮಕಾರಿಯಾಗಿ ನೆರವೇರಿಸುತ್ತಿರುವ ಶ್ರೀ ರೋಕಿ ಜೆ. ಲೋಬೊ ಮತ್ತು ಬಳಗದವರನ್ನು ವಿಶೇಷವಾಗಿ ಅಭಿನಂದಿಸಲು ಹೆಮ್ಮೆಯಾಗುತ್ತದೆ.

ಪುಟ ಸಂಖ್ಯೆ 14

ನಮ್ಮ ಈ ವಿದ್ಯಾಸಂಸ್ಥೆಯ ಕೀರ್ತಿಪತಾಕೆ ಇನ್ನಷ್ಟು ಎತ್ತರದಲ್ಲಿ ರಾರಾಜಿಸಲಿ, ಕಾಲೇಜು ಆಡಳಿತಾತ್ಮಕ ಮತ್ತು ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡುವಂತಾಗಲಿ, ಈ ಕಾಲೇಜಿಗೆ ಬರುವ ಎಲ್ಲರೂ ಅತ್ಯಂತ ಪ್ರತಿಭಾವಂತರೆನಿಸಿ, ಉತ್ತಮ ಭವಿಷ್ಯದೊಂದಿಗೆ ಜವಾಬ್ದಾರಿಯುತ ಪ್ರಜೆಗಳಾಗಿ ನಗುಮುಖದೊಂದಿಗೆ ಈ ಸಂಸ್ಥೆಯಿಂದ ನಿರ್ಗಮಿಸುವಂತಾಗಲಿ ಎಂದು ಆಶಿಸುತ್ತೇನೆ, ದೇವರು ಎಲ್ಲರನ್ನೂ ಅನುಗ್ರಹಿಸಲಿ. ಎಲ್ಲರಿಗೂ ಕ್ರಿಸ್ ಮಸ್ ಹಬ್ಬದ ಮತ್ತು ಹೊಸ ವರ್ಷದ ಶುಭಾಶಯಗಳು.

ಪ್ರೊ. ಪೆಟ್ರಿಕ್ ಮಿನೇಜಸ್

ಪ್ರಾಂಶುಪಾಲರು

23 ನೇ ಡಿಸೆಂಬರ್ 2008